ರಾಜ್ಯದಲ್ಲಿ ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ

೧೦೨. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).— ಮಾನ್ಯ ವಿದ್ಯುತ್ ಮತ್ತು ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿನ ಒಟ್ಟು ವಿದ್ಯುತ್ ಉತ್ಪಾದನೆ ?

ಆ) ರಾಜ್ಯದಲ್ಲಿದ್ದ ಒಟ್ಟು ವಿದ್ಯುತ್ ಬೇಡಿಕೆ ?

ಇ) ಭಾರಿ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳಿಗೆ ಅಸಮರ್ಪಕ ವಿದ್ಯುತ್ ವಿತರಣೆಯಿಂದಾಗಿ ರಾಜ್ಯದಲ್ಲಿ ಉಂಟಾಗಿರುವ ಆರ್ಥಿಕ ದುಃಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ರಾಜ್ಯದಲ್ಲಿ ಕೈಗೊಳ್ಳಲಾಗುತ್ತಿರುವ ವಿದ್ಯುತ್ ಯೋಜನೆಗಳಾವುವು ? ಅವುಗಳು ಈಗ ಯಾವ ಹಂತದಲ್ಲಿವೆ ?

ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮತ್ತು ಕೈಗಾರಿಕಾ ಸಚಿವರು).—

ಅ) ೧೯೮೭–೮೮ನೇ ಸಾಲಿನಲ್ಲಿ ಮಳೆಯ ಪ್ರಮಾಣ ಕಡಿಮೆಯಾದುದರಿಂದ ರಾಜ್ಯದಲ್ಲಿ ೭೪೪೦ ಮಿಲಿಯನ್ ಯೂನಿಟ್ ಉತ್ಪಾದನೆಯಾಗುವ ಅಂದಾಜಿಸಲಾಗಿದೆ. ಕೇಂದ್ರ ಯೋಜನೆಗಳಿಂದ ಮತ್ತು ನೆರೆ ರಾಜ್ಯಗಳಿಂದ ನಿರೀಕ್ಷಿಸಿರುವ ವಿದ್ಯುತ್ತನ್ನು ಸೇರಿಸಿ ೧೯೮೭–೮೮ ರಲ್ಲಿ ೧೦೩೦೭ ಮಿಲಿಯನ್ ಯೂನಿಟ್ಟಿಗಳು ದೊರೆಯುವ ನಿರೀಕ್ಷೆ ಇದೆ.

ಆ) ೧೯೮೭–೮೮ನೇ ಸಾಲಿನಲ್ಲಿ ಅನಿರ್ಬಂಧ ಬೇಡಿಕೆಯು ೧೬೯೦೦ ಮಿಲಿಯನ್ ಯೂನಿಟ್ ಎಂದು ಅಂದಾಜು ಮಾಡಲಾಗಿದೆ.

ಇ) ಕೈಗಾರಿಕೆಗಳಿಗೆ ತೊಂದರೆ ಆಗಿರುವುದು ಗಮನಕ್ಕೆ ಬಂದಿದೆ.

ಈ) ಅನುಬಂಧದಲ್ಲಿ ಕೊಟ್ಟಿದೆ,

ವರದಿಯನ್ನೊಪ್ಪಿಸುವುದು

ಶ್ರೀ ಶಿವಾನಂದ ಹೇಮಪ್ಪ ಕೌಜಲಗಿ (ಅಧ್ಯಕ್ಷರು, ವಿಧಾನಸಭಾ ಹಕ್ಕುಬಾಧ್ಯತಾ ಸಮಿತಿ).— ಮಾನ್ಯ ಅಧ್ಯಕ್ಷರೆ, ವಿಧಾನಸಭೆಯ ಹಕ್ಕುಬಾಧ್ಯತಾ ಸಮಿತಿಯ ಮೂರನೇ ವರದಿಯನ್ನು ಸಭೆಗೆ ಒಪ್ಪಿಸಿಕೊಡುತ್ತೇನೆ.

ಅಧ್ಯಕ್ಷರು.— ವರದಿಯನ್ನು ಒಪ್ಪಿಸಲಾಯಿತು.

ಮನವಿಗಳು

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಒಂದೇ ಒಂದು ವಿನಂತಿಯನ್ನು ಸರ್ಕಾರದವರಲ್ಲಿ ಮಾಡಿಕೊಳ್ಳುತ್ತೇನೆ. ಈ ಸದನವನ್ನು ಮುಂದೂಡಿ ಕಾಂಗ್ರೆಸ್ ಮಿತ್ರರನ್ನು ಕರೆಯಿಸಿ ಮಾತನಾಡಿ.

ಅಧ್ಯಕ್ಷರು.— ಆಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಇಷ್ಟೊಂದು ದೊಡ್ಡ.....

ಅಧ್ಯಕ್ಷರು.— ಕೇಳಿ ಇಲ್ಲಿ,

ಶ್ರೀ ಬಿ. ಎಸ್. ಯಡಿಯೂರಪ್ಪ.— ನಾನು ವಿರೋಧಪಕ್ಷದ ಸ್ಥಾನದಲ್ಲಿ ಕುಳಿತಾಗ ನನ್ನ ಕರ್ತವ್ಯವನ್ನು ನಾನು ಮಾಡುತ್ತೇನೆ. ಏನೋ ಕೆಲ ಘಟನೆ ನಡೆದಿದೆ. ಅದಕ್ಕಾಗಿ ಸೂಕ್ಷ್ಮ ಕ್ರಮ ತೆಗೆದುಕೊಂಡಿದ್ದಾರೆ. ಇಲ್ಲಿನ ಕಾಂಗ್ರೆಸ್ ಮಿತ್ರರು ಸಸ್ಪೆನ್‌ಷನ್ ರಿವೋಕ್ ಮಾಡಿರುವವರೆಗೂ ಸದನದಲ್ಲಿ ನಾವು ಕುಳಿತುಕೊಳ್ಳುವುದಿಲ್ಲ ಎಂದು ಹೊರಗಡೆ ಹೋಗಿದ್ದಾರೆ. ತಮ್ಮ ಮೂಲಕ ವಿನಂತಿ